ಅ) ಹಾಗಿದ್ದಲ್ಲಿ ಸರ್ಕಾರ ಈಗಾಗಲೇ ಇದರ ಬಗ್ಗೆ ಸಿಓಡಿ ತನಿಖೆಗೆ ಆದೇಶ ನೀಡಿದೆಯೇ;

ಇ) ಹಾಗಿದ್ದಲ್ಲಿ ಸಿಓಡಿ ವರದಿ ಸರ್ಕಾರಕ್ಕೆ ಬಂದಿದೇಯೆ;

ಈ) ತಪ್ಪಿತಸ್ಥರ ಮೇಲೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಉಮೇಶ್ ವಿ ಕತ್ತಿ (ಸಕ್ಕರೆ ಸಚಿವರು)

ಅ) ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯು 1994-95ಕ್ಕೆ ಇದ್ದಂತೆ 17, 58, 16, 894-00 ರೂಗಳ ಕ್ರೋಢಿಕೃತ ನಷ್ಟ ಅನುಭವಿಸಿದ್ದು ಸರ್ಕಾರದ ಗಮನಕ್ಕೆ ಬಂದಿದ್ದು, ಈ ಬಗ್ಗೆ ಸಿ.ಓ.ಡಿ. ತನಿಖೆಗೆ ಆದೇಶ ಮಾಡಿದೆ.

ಆ) ಹೌದು.

ಇ) ಸಿಓಡಿ ವರದಿಯನ್ನು ತೀವ್ರವಾಗಿ ಪರಿಶೀಲಿಸುತ್ತಿದ್ದು, ಪರಿಶೀಲನೆ ನಂತರ ನಿಯಮಾನುಸಾರ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು.

ಧಾರವಾಡ-ಹುಬ್ಬಳ್ಳಿ ಮಹಾನಗರ ಪಾಲಿಕೆಯ ಎರಡನೇ ಹಂತದ ಮಲಪ್ರಭಾ ನೀರು ಪೂರೈಕೆ ಯೋಜನೆ

429 (495) ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ).- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಧಾರವಾಡ-ಹುಬ್ಬಳ್ಳಿ ಮಹಾನಗರ ಪಾಲಿಕೆಯ ಮೊದಲನೆ ಹಂತದ ಮಲಪ್ರಭಾ ನೀರು ಸರಬರಾಜು ಸವದತ್ತಿಯಿಂದ ಯಾವಾಗ ಪ್ರಾರಂಭ ಮಾಡಲಾಯಿತು? ಅದಕ್ಕೆ ತಗುಲಿದ ಒಟ್ಟು ಹಣ ಎಷ್ಟು?

ಆ) ಮಹಾನಗರಕ್ಕೆ ನೀರು ಪೂರೈಕೆಯು ಮಲಪ್ರಭಾದಿಂದ ಪ್ರಾರಂಭಿಸಿದ ನಂತರ ಸವದತ್ತಿ-ಧಾರವಾಡ ಮಧ್ಯದ ಪೈಪು ಲೈನ್ ಲೀಕೇಜ್ (ಸೋರುವಿಕೆ) ಪ್ರಾರಂಭವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಸೋರುವಿಕೆಯು ತಡೆಯಲು ಪ್ರತಿ ವರ್ಷ ಖರ್ಚು ಮಾಡಿರುವ ಹಣವೆಷ್ಟು? ಇಲ್ಲಿಯವರೆಗಿನ ಪ್ರತಿ ವರ್ಷದ ಅಂಕಿ ಅಂಶ ಹಾಗೂ ಹಣದ ವೆಚ್ಚ ಕೊಡುವಿರಾ?

ಇ) ಎರಡನೆ ಹಂತದ ಮಲಪ್ರಭಾ ನೀರು ಪೂರೈಕೆಯ ಯೋಜನೆಯು ಯಾವ ಹಂತದಲ್ಲಿ ಇದೆ? ಅದಕ್ಕೆ ಹಣವೆಷ್ಟು ತಿಳಿಸುವಿರಾ? ಎರಡು ಹಂತದಿಂದ ಪ್ರತಿ ದಿನಕ್ಕೆ ಮಹಾನಗರ ಪಾಲಿಕೆಗೆ ಸಿಗುತ್ತಿರುವ ನೀರಿನ ಪ್ರಮಾಣ ಎಷ್ಟು?

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು).-

ಅ) ಧಾರವಾಡ-ಹುಬ್ಬಳ್ಳಿ ಮಹಾನಗರ ಪಾಲಿಕೆಯ ಮೊದಲನೆಯ ಹಂತದ ಮಲಪ್ರಭಾ ನೀರು ಸರಬರಾಜು ಸವದತ್ತಿಯಿಂದ ಏಪ್ರಿಲ್ 1983ರಲ್ಲಿ ನೀರು ಸರಬರಾಜು ಮಾಡಲು ಪ್ರಾರಂಭ ಮಾಡಲಾಯಿತು. ಅದಕ್ಕೆ ತಗುಲಿದ ಒಟ್ಟು ಹಣ ರೂ. 1148.44 ಲಕ್ಷಗಳು.

ಆ) ಯೋಜನೆಯಡಿಯಲ್ಲಿ 900 ಮೀ. ಮೀ ಗುರತ್ವಾಕರ್ಷಣ ಕೊಳವೆ ಮಾರ್ಗದಲ್ಲಿ ಸೋರುವಿಕೆ ಕಂಡಿದ್ದು, ಸೋರುವಿಕೆಯನ್ನು ಪಡೆಯಲು ಪ್ರತಿ ವರ್ಷ ಖರ್ಚು ಮಾಡಿದ ಹಣ ಈ ಕೆಳಗಿನಂತಿದೆ.

1. 1988-89 194488.00
2. 1989-90 108985.00
3. 1990-91 93344.00
4. 1991-92 179889.00
5. 1992-93 164321.00
6. 1993-94 257067.00
7. 1994-95 228202.00
8. 1995-96 799428.00
9. 1996-97 566658.00 ಜನವರಿಯ ವರೆಗೆ

ಇ) ಎರಡನೇ ಹಂತದ ಮಲಪ್ರಭಾ ಯೋಜನೆ ಮುಗಿಯುವ ಹಂತದಲ್ಲಿದ್ದು 3:97ರಲ್ಲಿ ಪೂರ್ಣ ಮುಗಿಸಲಾಗುವುದು. ಇದಕ್ಕೆ ತಗುಲಿದ ವೆಚ್ಚ 1275.00 ಲಕ್ಷಗಳು. ಎರಡು ಹಂತದಿಂದ ಪ್ರತಿದಿನ 12 ಎಂ.ಜಿ.ಡಿ. ನೀರು ಸಗಟು ಪ್ರಮಾಣದಲ್ಲಿ ಸರಬರಾಜು ಮಾಡಲಾಗುತ್ತಿದೆ.

ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಬರತಕ್ಕ ನಗರಗಳಿಗೆ ನೀರು ಪೂರೈಕೆ ಯೋಜನೆಗಳು

430 (495 ಎ) ಶ್ರೀ ಚಂದ್ರಕಾಂತ ಬೆಲ್ಲದ್ (ಧಾರವಾಡ):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ